No. 39, 2nd Floor, United Mansion,
Mahatma Gandhi Road,
Bangalore - 560 001. INDIA
Telegrams : HANDICRAFTS
✆ : 25582656 / 71204445 / 71204446 / 25582793
Post Bag No. 5307
E-mail : md@cauveryhandicrafts.net
Website : http//www.caurverycrafts.com
CIN : U75112KA1964SGC001526

Karnataka State Handicrafts Dev. Corp. Ltd.
(A Govt. of Karnataka Undertaking)

ಸಂಖ್ಯೆ: ಕ.ರಾ.ಕ.ಅ.ನಿ.ನಿ./ಮಾರುಕಟ್ಟೆ/ 74 /2023–24 ದಿನಾಂಕ: 23.11.2023

ವಿಷಯ: ಮಾಹಿತಿ ಹಕ್ಕು ಅಧಿನಿಯಮದ ನೋಡಲ್ ಅಧಿಕಾರಿ, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳ ವಿವರ ಕುರಿತು.

ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸ.ಪ್ರ.ಕೈ.). ರವರ ಪತ್ರ ಸಂಖ್ಯೆ ಸಿಐ 11 ಸಿಎಸ್‌ಸಿ 2023, ದಿನಾಂಕ: 10.11.2023.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ ಕ್ರಮ ಸಂಖ್ಯೆ (6) ರಲ್ಲಿ ಸೂಚಿಸಿರುವಂತೆ ಕ.ರಾ.ಕ.ಅ.ನಿ. ನಿಯಮಿತದಲ್ಲಿ ಮಾಹಿತಿ ಹಕ್ಕು ಅದಿನಿಯಮದ ನೋಡಲ್ ಅಧಿಕಾರಿ, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ. | ಕಾರ್ಯಾಲಯದ ಹೆಸರು | ಮಾಹಿತಿ ಹಕ್ಕು ಅಧಿನಿಯಮ 2005ರ ನೋಡಲ್ ಅಧಿಕಾರಿಗಳು | ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 5(2) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 19(1) ಪ್ರಕಾರ ಮೇಲ್ಮನವಿ ಪ್ರಾಧಿಕಾರ |
|---|---|---|---|---|
| 1 | ಕ.ರಾ.ಕ.ಅ.ನಿ.ನಿಯಮಿತ | ಶ್ರೀ ಮೈನಕ್ ಮಂಡಲ್ ವ್ಯವಸ್ಥಾಪಕರು (ಮಾರುಕಟ್ಟೆ) | ಶ್ರೀ ಮೈನಕ್ ಮಂಡಲ್ ವ್ಯವಸ್ಥಾಪಕರು (ಮಾರುಕಟ್ಟೆ) | ಪ್ರಧಾನ ವ್ಯವಸ್ಥಾಪಕರು (ಸಿಮತ್ತುಆ) |

| ಕ್ರ.ಸಂ. | ಕಾರ್ಯಾಲಯದ ಹೆಸರು | ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣ 5(1) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 5(2) ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 19(1) ಪ್ರಕಾರ ಮೇಲ್ಮನವಿ ಪ್ರಾಧಿಕಾರ |
|---|---|---|---|---|
| I | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಕೇಂದ್ರ ಕಛೇರಿ | | | |
| 1 | ಸಿಬ್ಬಂದಿ ಮತ್ತು ಆಡಳಿತ ವಿಭಾಗ | ಶ್ರೀ ಮೈನಕ್ ಮಂಡಲ್, ವ್ಯವಸ್ಥಾಪಕರು, ಮಾರುಕಟ್ಟೆ ವಿಭಾಗ | ಹರೀಶ್ ಬಿ.ಎನ್. ಕಿರಿಯ ಮಾರಾಟ ಸಹಾಯಕರು | ಪ್ರಧಾನ ವ್ಯವಸ್ಥಾಪಕರು (ಸಿಮತ್ತುಆ) |
| 2 | ಹಣಕಾಸು ವಿಭಾಗ | | ನಾರಾಯಣಮೂರ್ತಿ ಎನ್. ಶೀಘ್ರಲಿಪಿಗಾರರು | |
| 3 | ಮಾರುಕಟ್ಟೆ ವಿಭಾಗ | | ಹರೀಶ್ ಬಿ.ಎನ್., ಕಿರಿಯ ಮಾರಾಟ ಸಹಾಯಕರು | |
| 4 | ಅಭಿವೃದ್ಧಿ ವಿಭಾಗ | | ಭಾರತಿ ಬಾಯಿ ಎಸ್. ಕಿರಿಯ ಮಾರಾಟ ಸಹಾಯಕರು | |

| II | ಕಾವೇರಿ ಮಾರಾಟ ಮಳಿಗೆ | | | |
|---|---|---|---|---|
| 1 | 'ಕಾ' ಮಾರಾಟ ಮಳಿಗೆ, ನಂ.49, ಎಂ.ಜಿ.ರಸ್ತೆ, ಬೆಂಗಳೂರು–560 001 | ಶ್ರೀ ಮೈನಕ್ ಮಂಡಲ್, ವ್ಯವಸ್ಥಾಪಕರು, ಮಾರುಕಟ್ಟೆ ವಿಭಾಗ | ಪರಶುರಾಮ್ ಎಸ್., ವ್ಯವಸ್ಥಾಪಕರು | ಪ್ರಧಾನ ವ್ಯವಸ್ಥಾಪಕರು (ಸಿಮತ್ತುಆ) |
| 2 | 'ಕಾ' ಮಾರಾಟ ಮಳಿಗೆ, ಜಯನಗರ (ಹೊಸದು), ಬೆಂಗಳೂರು –560011 | | ಪ್ರಭು ವ್ಯವಸ್ಥಾಪಕರು | |
| 3 | 'ಕಾ' ಮಾರಾಟ ಮಳಿಗೆ, ಜಯನಗರ (ಹಳೆಯದು), ಬೆಂಗಳೂರು –560011. | ಶ್ರೀ ಮೈನಕ್‌ಮಂಡಲ್, ವ್ಯವಸ್ಥಾಪಕರು, ಮಾರುಕಟ್ಟೆ ವಿಭಾಗ | ಎಸ್.ಜಿ.ಶಿವರಾಂ, ಕಿರಿಯ ಸಹಾಯಕರು | ಪ್ರಧಾನ ವ್ಯವಸ್ಥಾಪಕರು (ಸಿಮತ್ತುಆ) |
| 4 | 'ಕಾ' ಮಾರಾಟ ಮಳಿಗೆ, ಸಯ್ಯಾಜಿರಾವ್ ರಸ್ತೆ, ಮೈಸೂರು–570001 | | ಸೇವಂತಿ ಆರ್. ಪ್ರಭಾರ ವ್ಯವಸ್ಥಾಪಕರು | |
| 5 | 'ಕಾ' ಮಾರಾಟ ಮಳಿಗೆ, ಅರಮನೆ, ಮೈಸೂರು. | | ಕಾಂಬ್ಳೆ ಎನ್.ಪಿ., ಕಿರಿಯ ಮಾರಾಟ ಸಹಾಯಕರು | |
| 6 | ಡಾ.ಬಿ.ಆರ್.ಅಂಬೇಡ್ಕರ್ ಕಾಂಪ್ಲೆಕ್ಸ್, ಪಿ.ವಿ.ಎಸ್. ಸರ್ಕಲ್, ಕೋಡಿಯಾಲ್ ಬೈಲ್, ಆರ್.ಆರ್.ರಸ್ತೆ, ಮಂಗಳೂರು–575003 | | ನಾಗರಾಜ್ ವೈ.ಟಿ., ಕಿರಿಯ ಮಾರಾಟ ಸಹಾಯಕರು | |
| 7 | 'ಕಾ' ಮಾರಾಟ ಮಳಿಗೆ, ಸ್ಟೇಷನ್ ರಸ್ತೆ, ಹುಬ್ಬಳ್ಳಿ. | | ಎಲ್.ರಮೇಶ್, ಕಿರಿಯ ಸಹಾಯಕರು/ಕಿ.ಮಾ.ಸ. | |
| 8 | 'ಕಾ' ಮಾರಾಟ ಮಳಿಗೆ, ಸಿ–4, ಸ್ಟೇಟ್ ಎಂಪೋರಿಯ ಕಾಂಪ್ಲೆಕ್ಸ್, ಬಾಬ ಕಾರಕ್ ಸಿಂಗ್ ಮಾರ್ಗ್, ಹೊಸ ದೆಹಲಿ | | ಪೂರಣ್ ಸಿಂಗ್, ಅಟೆಂಡರ್ | |
| 9 | 'ಕಾ' ಮಾರಾಟ ಮಳಿಗೆ, ನಂ.40, ಸೆವೆನ್ ಹಿಲ್ಸ್ ಪ್ಲಾಜ, ಎಸ್.ಡಿ.ರಸ್ತೆ, ಸಿಕಂದರಾಬಾದ್–500003 | | ತಲ್ವಾರ್ ಆರ್.ಸಿ., ಮಾರಾಟ ಸಹಾಯಕರು | |
| 10 | 'ಕಾ' ಮಾರಾಟ ಮಳಿಗೆ, ದಕ್ಷಿಣಪನ್ ಮಾರ್ಕೆಟ್ ಕಾಂಪ್ಲೆಕ್ಸ್, ಗರಿಯಾಹಟ್ ರೋಡ್ ಸೌತ್, ಕೊಲ್ಕತ್ತ | | ಮೊಂಟುದಾಸ್, ಕಾವಲುಗಾರ | |
| 11 | 'ಕಾ' ಮಾರಾಟ ಮಳಿಗೆ, ಏಕ್ತಾ ಮಾಲ್, ಕೆವಾಡಿಯ, ನರ್ಮದ ಡಿಸ್ಟ್ರಿಕ್ಟ್, ಗುಜರಾತ್ ಸ್ಟೇಟ್. | | | |
| 12 | 'ಕಾ' ಮಾರಾಟ ಮಳಿಗೆ, ಚನ್ನೈ. | | ಬಿ.ಎಸ್.ಪ್ರಶಾಂತ್, ಕಿ.ಮಾ.ಸಹಾಯಕರು | |

| III | ಕಲಾ ಸಂಕೀರ್ಣ/ಪ್ರೊಕ್ಯೂರ್‌ಮೆಂಟ್ ಸೆಂಟರ್ಸ್ | | | |
|---|---|---|---|---|
| 1 | ಶ್ರೀಗಂಧದ ಕಲಾ ಸಂಕೀರ್ಣ, ಕೆಳದಿ ರಸ್ತೆ, ಸಾಗರ–577401 | ಶ್ರೀ ಮೈನಕ್ ಮಂಡಲ್, ವ್ಯವಸ್ಥಾಪಕರು, ಮಾರುಕಟ್ಟೆ ವಿಭಾಗ | ಗಣೇಶ್ ಸಿಂಗ್ ಪಿ., ಕಿರಿಯ ಮಾರಾಟ ಸಹಾಯಕರು | ಪ್ರಧಾನ ವ್ಯವಸ್ಥಾಪಕರು (ಸಿಮತ್ತುಆ) |
| 2 | ಶ್ರೀಗಂಧದ ಕಲಾ ಸಂಕೀರ್ಣ, ಶ್ರೀಗಂಧ ನಗರ, ಮುರೂರ್ ರಸ್ತೆ, ಸೊರಬ–577 | | ಗಣೇಶ್ ಸಿಂಗ್ ಪಿ., ಕಿರಿಯ ಮಾರಾಟ ಸಹಾಯಕರು | |
| 3 | ಶ್ರೀಗಂಧದ ಕಲಾ ಸಂಕೀರ್ಣ, ಚಿಪಗಿ ಪೋಸ್ಟ್, ಕೊರ್ಲಾಕಟ್ಟಾ ರಸ್ತೆ, ಶಿರಸಿ –581401 | | ಗಣೇಶ್ ಸಿಂಗ್ ಪಿ., ಕಿರಿಯ ಮಾರಾಟ ಸಹಾಯಕರು | |
| 4 | ಶ್ರೀಗಂಧದ ಕಲಾ ಸಂಕೀರ್ಣ, ಮುರೂರ್ ರಸ್ತೆ, ಸಿದ್ದನಭಾವಿ, ಕುಮಟ. | | ಗಣೇಶ್ ಸಿಂಗ್ ಪಿ., ಕಿರಿಯ ಮಾರಾಟ ಸಹಾಯಕರು | |
| 5 | ರತ್ನಗಂಬಳಿ ಕಲಾ ಸಂಕೀರ್ಣ, ಗಾಂಧಿನಗರ ಪ್ಲಾಟ್, ಬಂಕಾಪುರ ರಸ್ತೆ, ಮುಂಡಗೋಡು–581349 | | ರಮೇಶ್ ಎಲ್., ಕಿರಿಯ ಮಾರಾಟ ಸಹಾಯಕರು | |
| 6 | ಬಹುಕಲಾ ಸಂಕೀರ್ಣ, ಕರಕುಶಲ ನಗರ, ಮೇಟಗಳ್ಳಿ, ಮೈಸೂರು–570016 | | ಸೇವಂತಿ ಆರ್., ಪ್ರಭಾರ ವ್ಯವಸ್ಥಾಪಕರು | |
| 7 | ಬಹುಕಲಾ ಸಂಕೀರ್ಣ, ನಂ.39, 2 ನೇ ಮಹಡಿ, ಯುನೈಟೆಡ್ ಮ್ಯಾನ್ ಷನ್, ಎಂ.ಜಿ.ರಸ್ತೆ, ಬೆಂಗಳೂರು – 560001. | | ಹರೀಶ್ ಬಿ.ಎನ್., ಕಿರಿಯ ಮಾರಾಟ ಸಹಾಯಕರು | |
| 8 | ಬಿದರಿ ಕಲಾ ಸಂಕೀರ್ಣ, ಮೈಲೂರು ರಸ್ತೆ, ಬೀದರ್ – 585403 | | ನಿಜಾಮುದ್ದೀನ್, ಅಟೆಂಡರ್ | |
| 9 | ಅರಗು ಬಣ್ಣದ ಕಲಾ ಸಂಕೀರ್ಣ, ತಟ್ಟೆಕೆರೆ ರಸ್ತೆ, ಚನ್ನಪಟ್ಟಣ–571501 | | ಖಲೀಮುಲ್ಲ ಷರೀಫ್, ಕಿರಿಯ ಮಾರಾಟ ಸಹಾಯಕರು | |

| | | | | |
|---|---|---|---|---|
| 10 | ಕುಂಬಾರಿಕಾ ಕಲಾ ಸಂಕೀರ್ಣ, ಕುಂಬಾಪುರ, ಬಿ.ಎಂ.ರಸ್ತೆ, ರಾಮನಗರ–571511 | ಶ್ರೀ ಮೈನಕ್ ಮಂಡಲ್, ವ್ಯವಸ್ಥಾಪಕರು, ಮಾರುಕಟ್ಟೆ ವಿಭಾಗ | ಖಲೀಮುಲ್ಲ ಷರೀಫ್, ಕಿರಿಯ ಮಾರಾಟ ಸಹಾಯಕರು | ಪ್ರಧಾನ ವ್ಯವಸ್ಥಾಪಕರು (ಸಿಮತ್ತುಆ) |
| 11 | ಕಲ್ಲು ಕೆತ್ತನೆ ಕಲಾ ಸಂಕೀರ್ಣ, ಶಿವಾರಪಟ್ಟಣ ಗ್ರಾಮ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ –563130 | | ಬಿ.ಎಸ್.ಹರೀಶ್ ಕಿರಿಯ ಮಾರಾಟ ಸಹಾಯಕರು | |
| 12 | ಕಿನ್ನಾಳ ಖರೀದಿ ಕೇಂದ್ರ, ಕಿನ್ನಾಳ, ಕೊಪ್ಪಳ ಜಿಲ್ಲೆ–583231. | | ರಮೇಶ್ ಎಲ್., ಕಿರಿಯ ಮಾರಾಟ ಸಹಾಯಕರು | |
| 13 | ಆರ್.ಎಂ ಅಂಡ್ ಎಸ್.ಸಿ. ಗವೀಮಠದ ಹತ್ತಿರ, ನವಲಗುಂದ, ಧಾರವಾಡ ಜಿಲ್ಲೆ. | | ರಮೇಶ್ ಎಲ್., ಕಿರಿಯ ಮಾರಾಟ ಸಹಾಯಕರು | |

23/11/23

ಪ್ರಭಾರ ಪ್ರಧಾನ ವ್ಯವಸ್ಥಾಪಕರು (ಮಾರುಕಟ್ಟೆ) ಹಾಗೂ
ಸಾರ್ವಜನಿಕ ಮಾಹಿತಿ ಅಧಿಕಾರಿಗಳು

Copy To.
1) All APIOs
2) FAA.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು -560001. ದೂ. 22034319

ಸಂಖ್ಯೆ: ಸಿಐ 11 ಸಿಎಸ್ ಸಿ 2023

ದಿನಾಂಕ: 10.11.2023

ಇಂದ:

ಸರ್ಕಾರದ ಕಾರ್ಯದರ್ಶಿ,
(ಎಂ.ಎಸ್.ಎಂ.ಇ. & ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸ ಸೌಧ, ಬೆಂಗಳೂರು-01.

ಇವರಿಗೆ:

1. ನಿರ್ದೇಶಕರು (ಎಂ.ಎಸ್.ಎಂ.ಇ.), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-10
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ನಂ.45, ಕೆ.ಎಸ್.ಹೆಚ್.ಡಿ.ಸಿ. ಕಾಂಪ್ಲೆಕ್ಸ್, ಎಂ.ಜಿ.ರಸ್ತೆ, ಬೆಂಗಳೂರು-01.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಎಸ್ಎಫ್-4& 5, ಸ್ಟರ್ಲಿಂಗ್ ಟವರ್ಸ್ (ಗಾರ್ಮೆಂಟ್ ಕಾಂಪ್ಲೆಕ್ಸ್), 6ನೇ ಬ್ಲಾಕ್, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ (ನಿ), ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ 3ನೇ ಮಹಡಿ, 1ನೇ ಅಡ್ಡರಸ್ತೆ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂ-10.
6. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ನಂ.10, ಖಾದಿ ಭವನ, ಜಸ್ಮಾ ಭವನ ರಸ್ತೆ, ವಸಂತನಗರ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು, 2ನೇ ಮಹಡಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ , ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂ-10.
8. ನಿರ್ದೇಶಕರು, ಕರ್ನಾಟಕ ಸರ್ಕಾರ ಚರ್ಮ ತಾಂತ್ರಿಕ ಸಂಸ್ಥೆ (ಕಿಲ್ಟ್), ಉಲ್ಲಾಳ್ ಉಪನಗರ, ಬೆಂ-56.

ಮಾನ್ಯರೆ,

**ವಿಷಯ:** ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 4ರ ಅನುಷ್ಠಾನದ ಕುರಿತು ದಿನಾಂಕ: 07.09.2023 ರಂದು ನಡೆದ ಪೂರ್ವಭಾವಿ ಸಭೆಯ ನಡವಳಿ.

**ಉಲ್ಲೇಖ:** ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಆಸು-ತರಬೇತಿ & ಮಾಹಿತಿ ಹಕ್ಕು ಶಾಖೆ) ರವರ ಅ.ಟಿ ಸಂಖ್ಯೆ: ಸಿಆಸುಇ (ಆಸು) 117 ಆರ್‌ಟಿಐ 2023, ದಿ: 22.09.2023. (E-6563162)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ರವರ ಅಧ್ಯಕ್ಷತೆಯಲ್ಲಿ ದಿನಾಂಕ: 07.09.2023ರಂದು ನಡೆದ ಮಾಹಿತಿ ಹಕ್ಕು ಅಧಿನಿಯಮ, 2005ರ ಪರಿಣಾಮಕಾರಿ ಅನುಷ್ಠಾನ ಹಾಗೂ ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ (4)ರ ಅನುಷ್ಠಾನದ ಕುರಿತು ನಡೆದ ಪೂರ್ವಭಾವಿ ಸಭೆಯ ನಡವಳಿಯ ಕ್ರಮ ಸಂಖ್ಯೆ (6) ರಲ್ಲಿ ಎಲ್ಲಾ ಇಲಾಖೆಗಳಿಗೆ ಸೂಚನೆ ಇದ್ದು, ಅದರಂತೆ, ಅಗತ್ಯ ಕ್ರಮ ವಹಿಸುವಂತೆ ಸದರಿ ಸಭಾ ನಡವಳಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

20 NOV 2023
143
ಬೆಂಗಳೂರು

ತಮ್ಮ ನಂಬುಗೆಯ,

10.11.2023

(ಆರ್. ರಾಜಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸ.ಪ್ರ.ಕೈ.).

PIO

6563162/2023 (380)

ಕರ್ನಾಟಕ ಸರ್ಕಾರ
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**
**(ಆಡಳಿತ ಸುಧಾರಣೆ)**

ಸಂಖ್ಯೆ: ಸಿಆಸುಇ (ಆಸು) 117 ಆರ್‌ಟಿಐ 2023
ಇ-ಆಫೀಸ್ ಸಂಖ್ಯೆ: 1089427

ಕರ್ನಾಟಕ ಸರ್ಕಾರದ ಸಚಿವಾಲಯ,
6ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 22-09-2023

**ಅನಧಿಕೃತ ಟಿಪ್ಪಣಿ**

**ವಿಷಯ:** ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 4 ರ ಅನುಷ್ಠಾನದ ಕುರಿತು ದಿನಾಂಕ: 07-09-2023 ರಂದು ನಡೆದ ಪೂರ್ವಭಾವಿ ಸಭೆಯ ಕುರಿತು.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ ಆಡಳಿತ ಸುಧಾರಣೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ, ಮಾಹಿತಿ ಹಕ್ಕು ಅಧಿನಿಯಮ , 2005ರ ಪರಿಣಾಮಕಾರಿ ಅನುಷ್ಠಾನ ಹಾಗೂ ಮಾಹಿತಿ ಹಕ್ಕು ಅಧಿನಿಯಮ , 2005ರ ಕಲಂ (4)ರ ಅನುಷ್ಠಾನದ ಕುರಿತು ದಿನಾಂಕ: 07-09-2023 ರಂದು ನಡೆದ ಪೂರ್ವಭಾವಿ ಸಭೆಯ ನಡವಳಿ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ನಡವಳಿಯ ಅನುಸಾರ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿದೆ.

Janaki YR 22/9
(ವೈ.ಆರ್.ಜಾನಕಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ(ಆಸು-ತರಬೇತಿ & ಮಾಹಿತಿ ಹಕ್ಕು ಶಾಖೆ

**ಇವರಿಗೆ:**
ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.

**ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಇವರ ಅಧ್ಯಕ್ಷತೆಯಲ್ಲಿ "ಮಾಹಿತಿ ಹಕ್ಕು ಅಧಿನಿಯಮ 2005ರ ಪರಿಣಾಮಕಾರಿ ಅನುಷ್ಠಾನಕ್ಕೆ" ಸಂಬಂಧಿಸಿದಂತೆ ದಿನಾಂಕ:07-09-2023ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಪೂರ್ವಭಾವಿ ಸಭೆಯ ನಡವಳಿಗಳು.**

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ಸಭೆಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಲಾಯಿತು.

1. ಮಾಹಿತಿ ಹಕ್ಕು ಅಧಿನಿಯಮ 2005ರ ಪರಿಣಾಮಕಾರಿ ನಿರ್ವಹಣೆ ಬಗ್ಗೆ ಎಲ್ಲಾ ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿ (Public Information Officer) ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳಿಗೆ (First Appeal Authority) ಆಡಳಿತ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳಿಂದ ತರಬೇತಿಯನ್ನು ನೀಡಲಾಗುತ್ತಿದ್ದು, ಇದನ್ನು ಮತ್ತೆ ಪುನರಾವರ್ತಿತಗೊಳಿಸಬೇಕೆಂದು ಸೂಚಿಸಿದರು.

**(ಕ್ರಮ: ಆಡಳಿತ ತರಬೇತಿ ಸಂಸ್ಥೆ, ಮೈಸೂರು)**

2. ಕರ್ನಾಟಕ ಮಾಹಿತಿ ಆಯೋಗದಲ್ಲಿ ಮುಕ್ತಾಯಗೊಂಡಿರುವ 2ನೇ ಮೇಲ್ಮನವಿ ಪ್ರಕರಣಗಳ ಕಡತಗಳ ನಿರ್ವಹಣೆ ಮತ್ತು ವಿಲೇವಾರಿ ಬಗ್ಗೆ ಕರಡು ನಿಯಮವನ್ನು ರಚಿಸಲಾಗಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.
3. ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿಯಿರುವ ಶಾಖಾಧಿಕಾರಿ ಮತ್ತು ಅಧೀನ ಕಾರ್ಯದರ್ಶಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಸಿಆಸು ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ ರವರು ತಿಳಿಸಿದರು.
4. ಕರ್ನಾಟಕ ಮಾಹಿತಿ ಆಯೋಗಕ್ಕೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡುವ ವಿಷಯವು ಮತ್ತು ಆಯೋಗದಲ್ಲಿ ಹೆಚ್ಚುವರಿ ಹುದ್ದೆಗಳ ಸೃಜನೆ ವಿಷಯವು ಬೇರೆ ಬೇರೆಯಾಗಿರುತ್ತದೆ. ಆದುದರಿಂದ ಈ ಬಗ್ಗೆ ಸೂಕ್ತ ಸಮರ್ಥನೆಯೊಂದಿಗೆ, ಪ್ರತ್ಯೇಕವಾದ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.

**(ಕ್ರಮ: ಸಿಆಸುಇ (ಆಸು) ಮತ್ತು ಕರ್ನಾಟಕ ಮಾಹಿತಿ ಆಯೋಗ)**

5. ಇಲಾಖೆಗಳಲ್ಲಿ ನೇಮಕಾತಿ ಪ್ರಾಧಿಕಾರವು ಒಬ್ಬರೇ ಇದ್ದರೂ, ಆಯ್ಕೆ ಸಮಿತಿಯಲ್ಲಿ ಇತರ ಇಲಾಖೆಗಳ ಅಧಿಕಾರಿಗಳು ಇರುತ್ತಾರೆ. ಆದರೆ, ಕರ್ನಾಟಕ ಮಾಹಿತಿ ಆಯೋಗದಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಕರ್ನಾಟಕ ಮಾಹಿತಿ ಆಯೋಗ ಇವರು ನೇಮಕಾತಿ ಪ್ರಾಧಿಕಾರ ಮತ್ತು ಆಯ್ಕೆ ಪ್ರಾಧಿಕಾರ ಆಗಿರುತ್ತಾರೆ. ನೇಮಕಾತಿ ಪ್ರಕ್ರಿಯೆಯು ಪಾರದರ್ಶಕವಾಗಿರಲು ನೇಮಕಾತಿ ಪ್ರಾಧಿಕಾರದ ಆಯ್ಕೆ ಸಮಿತಿಯಲ್ಲಿ ಇನ್ನೂ 2-3 ಅಧಿಕಾರಿಗಳು ಇರುವ ಬಗ್ಗೆ ಪರಿಶೀಲಿಸುವಂತೆ ಸೂಚಿಸಲಾಯಿತು.

**(ಕ್ರಮ: ಕರ್ನಾಟಕ ಮಾಹಿತಿ ಆಯೋಗ)**

6. ಎಲ್ಲಾ ಇಲಾಖೆಗಳು ಸ್ವತ: ತಾವೇ ಗಮನಹರಿಸಿ ಇಲಾಖೆಯಲ್ಲಿನ ಮಾಹಿತಿ ಹಕ್ಕು ಅಧಿನಿಯಮದ 'ನೋಡಲ್ ಅಧಿಕಾರಿ', 'ಸಾರ್ವಜನಿಕ ಮಾಹಿತಿ ಅಧಿಕಾರಿ' ಮತ್ತು 'ಪ್ರಥಮ ಮೇಲ್ಮನವಿ ಪ್ರಾಧಿಕಾರಿ' ಗಳ ವಿವರವನ್ನು ಆಯಾ ಇಲಾಖೆಯ ಕಛೇರಿಗಳ ಸೂಚನಾ ಫಲಕ ಮತ್ತು ಜಾಲತಾಣದಲ್ಲಿ (ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ) ಪ್ರಕಟಿಸುವಂತೆ ಹಾಗೂ ಈ ಬಗ್ಗೆ ಪ್ರಚಾರ ಮಾಡಿ, ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸೂಚಿಸಲಾಯಿತು.

**(ಕ್ರಮ: ಎಲ್ಲಾ ಇಲಾಖೆಗಳು ಮತ್ತು ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ)**

7. ಮಾಹಿತಿ ಹಕ್ಕು ಅಧಿನಿಯಮ 2005ರಡಿ ರಾಜ್ಯದ ಎಲ್ಲಾ ಸಾರ್ವಜನಿಕ ಮಾಹಿತಿ ಪ್ರಾಧಿಕಾರಗಳಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(a) ಮತ್ತು 4(1)(b)(i)–(xvii)ರವರೆಗಿನ ನಿಯಮಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನಿರ್ದೇಶನ ನೀಡುವಂತೆ ಹಾಗೂ ಅನುಷ್ಠಾನಗೊಳಿಸಿದ ಬಗ್ಗೆ ಅನುಪಾಲನಾ ವರದಿಯನ್ನು ದಿನಾಂಕ: 30-09-2023ರೊಳಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ) ಇವರಿಗೆ ಸಲ್ಲಿಸುವಂತೆ ಪತ್ರ ಸಂಖ್ಯೆ: ಸಿಆಸುಇ (ಆಸು) 239 ಆರ್‌ಟಿಐ 2023, ದಿನಾಂಕ: 04-09-2023ರ ಪತ್ರದಲ್ಲಿ ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಗಿದೆ. ಈ ಬಗ್ಗೆ ಮತ್ತೊಮ್ಮೆ ಅರೆ ಸರ್ಕಾರಿ ಪತ್ರವನ್ನು ಹೊರಡಿಸುವುದು.

**(ಕ್ರಮ: ಸಿಆಸುಇ-ಆಸು)**

8. ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ ಇವರು ಮಾಹಿತಿ ಹಕ್ಕು ಕಾಯ್ದೆಯ 2022-2023ನೇ ಸಾಲಿನ ವಾರ್ಷಿಕ ವರದಿಯನ್ನು ತಯಾರಿಸಲು ಹಲವು ಇಲಾಖೆಗಳು ಮಾಹಿತಿಯನ್ನು ಒದಗಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಕರ್ನಾಟಕ ಮಾಹಿತಿ ಆಯೋಗವೇ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರವನ್ನು ಬರೆದು, ಮಾಹಿತಿ ಪಡೆಯುವಂತೆ ತಿಳಿಸಲಾಯಿತು.

**(ಕ್ರಮ: ಕರ್ನಾಟಕ ಮಾಹಿತಿ ಆಯೋಗ)**

9. Online RTI Portal ಉಪಯೋಗಿಸುವ ಎಲ್ಲಾ ಇಲಾಖೆಗಳ ನೋಡಲ್ ಅಧಿಕಾರಿಗಳು, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳಿಗೆ ಮತ್ತು ಜಿಲ್ಲಾ ಮಟ್ಟದಲ್ಲಿನ ಅಧಿಕಾರಿಗಳಿಗೂ ಸಹ ನಿಯಮಿತವಾಗಿ ತರಬೇತಿಯನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆಯೂ, ಈ ಬಗ್ಗೆ Online RTI Cellನ್ನು ಸಿಆಸುಇ (ಇ-ಆಡಳಿತ)ದಡಿ ಸೃಜಿಸಿ, ಈ ಕೋಶವು ತರಬೇತಿಯನ್ನು ಆಯೋಜಿಸಲು ಕ್ರಮಕೈಗೊಳ್ಳುವುದು.

**(ಕ್ರಮ: ಸಿಆಸುಇ (ಇ-ಆಡಳಿತ))**

10. ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯಾಲಯಗಳು ಹೊರಡಿಸಿರುವ ಆದೇಶಗಳನ್ವಯ ಮಾಹಿತಿ ಒದಗಿಸಬಹುದಾದ ಅಥವಾ ಒದಗಿಸಲು ಸಾಧ್ಯವಿಲ್ಲದಿರುವ ಅಂಶಗಳ ಬಗ್ಗೆ ಮತ್ತು ಆಗ್ಗಿಂದಾಗ್ಗೆ ಕೇಳಲಾಗುವ ಪ್ರಶ್ನೆಗಳ ಕುರಿತು FAQ ತಯಾರಿಸುವಂತೆ ಕರ್ನಾಟಕ ಮಾಹಿತಿ ಆಯೋಗಕ್ಕೆ ಸೂಚಿಸಲಾಯಿತು.

**(ಕ್ರಮ: ಕರ್ನಾಟಕ ಮಾಹಿತಿ ಆಯೋಗ)**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಡತ ಸಂಖ್ಯೆ:ಸಿಆಸುಇ (ಆಸು) 117 ಆರ್‌ಟಿಐ 2023.

**(ಮುನೀಷ್ ಮೌದ್ಗಿಲ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
(ಆಡಳಿತ ಸುಧಾರಣೆ).